8015 – B22 – IISA – A – 13

SECOND SEMESTER B.A. DEGREE EXAMINATION, APRIL 2013
KANNADA (Optional) (New Syllabus)

Time: 3 Hours] [Max. Marks: 80

ಸೂಚನೆ: ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.

1. ವಚನ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ಕುರಿತು ಬರೆಯಿರಿ.

   ಅಥವಾ

   ಅನುಭಾವ ಸಾಹಿತ್ಯಕ್ಕೆ ತತ್ವ ಪದಕಾರರ ಕೊಡುಗೆಯನ್ನು ವಿವರಿಸಿರಿ. 12

2. ಷಟ್ಪದಿ ಸಾಹಿತ್ಯಕ್ಕೆ ರಾಘವಾಂಕ, ಕುಮಾರವ್ಯಾಸ ಕವಿಗಳ ಕೊಡುಗೆಯನ್ನು ವಿವರಿಸಿರಿ.

   ಅಥವಾ

   ತ್ರಿಪದಿಯ ಹುಟ್ಟು-ಬೆಳವಣಿಗೆಯನ್ನು ಕುರಿತು ಬರೆಯಿರಿ. 12

3. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ.
   1) ಹರಿಹರ
   2) ದೇವರ ದಾಸಿಮಯ್ಯ
   3) ಕೀರ್ತನ ಸಾಹಿತ್ಯ
   4) ಅಕ್ಕಮಹಾದೇವಿ. 10

4. ಸರ್ವಜ್ಞನ ವಚನಗಳಲ್ಲಿ ವ್ಯಕ್ತವಾದ ಲೋಕನೀತಿಯನ್ನು ವಿವರಿಸಿರಿ.

   ಅಥವಾ

   ಬಸವಣ್ಣ , ಮಾದಾರ ಚನ್ನಯ್ಯ , ಅಕ್ಕಮಹಾದೇವಿ ಇವರಲ್ಲಿ ಇಬ್ಬರು ವಚನಕಾರರ ವಚನಗಳನ್ನು ವಿಶ್ಲೇಷಿಸಿರಿ. 12

5. 'ಉದರ ವೈರಾಗ್ಯ', 'ಸತ್ಯವಂತರ ಸಂಗವಿರಲು' ಕೀರ್ತನೆಗಳಲ್ಲಿಯ ಸಾಮಾಜಿಕ ಚಿತ್ರಣವನ್ನು ವಿವರಿಸಿರಿ.

   ಅಥವಾ

   ಮಲುಹಣನ ರಗಳೆಯಲ್ಲಿ ಮಲುಹಣನ ಪ್ರೀತಿ ಭಕ್ತಿಯಾಗಿ ಮಾರ್ಪಾಡಾದ ಬಗೆಯನ್ನು ಚರ್ಚೆ ಮಾಡಿರಿ. 12

[P.T.O.

6. ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ :

   1) ಅಂಬಿಗರ ಚೌಡಯ್ಯನವರ ವಚನಗಳು
   2) ನೀನೇ ಆಕಳಂಕ ಗುರು
   3) ಕನಕದಾಸರು
   4) ನಿಜಗುಣ ಶಿವಯೋಗಿ. **10**

7. **ಒಂದು** ವಾಕ್ಯದಲ್ಲಿ ಉತ್ತರಿಸಿರಿ :

   1) ಹರಿಹರನ ತಂದೆ-ತಾಯಿಗಳು ಯಾರು ?
   2) ಅಂಬಿಗರ ಚೌಡಯ್ಯನವರ ವಚನಾಂಕಿತ ಏನು ?
   3) ಚಾಮರಸನ ಕೃತಿ ಯಾವುದು ?
   4) ಉಪಮಾಲೋಲ ಬಿರುದಾಂಕಿತ ಕವಿ ಯಾರು ?
   5) ಕುಮಾರವ್ಯಾಸನ ಜನ್ಮಸ್ಥಳ ಯಾವುದು ?
   6) ಪುರಂದರದಾಸರ ಮೂಲ ಹೆಸರೇನು ?
   7) ಬಸವಣ್ಣನವರಿಗೆ ದೀಕ್ಷೆಯಿತ್ತವರು ಯಾರು ?
   8) ಕನ್ನಡ ಸಾಹಿತ್ಯದ ಮೊದಲ ಕವಿಯತ್ರಿ ಯಾರು ?
   9) ಮಲುಹಣನ ತಂದೆಯ ಹೆಸರೇನು ?
   10) ಅಂಬಿಗರ ಚೌಡಯ್ಯನ ಜನ್ಮಸ್ಥಳ ಯಾವುದು ?
   11) ಹರಿಹರನ ಆರಾಧ್ಯ ದೈವ ಯಾರು ?
   12) ಕನಕದಾಸರ ಕೀರ್ತನೆಗಳ ಅಂಕಿತವೇನು ? **12**